ಓ. ಎಸ್ . 26/2016                    ಡಿ.ಡಬ್ಲ್ಯೂ - 4 ದಿಲಶಾದಬೇಗಂ ಹಬೀದ

**(ದಿನಾಂಕಃ 24-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ವಾಟಿ ಸವಾಲು : ವಾದಿ ಪರ ಶ್ರೀ ಕೆ ಬಿ ಕೆ ವಕೀಲರಿಂದ -**

ನಾನು ಖರೀದಿಗೆ ತೆಗೆದುಕೊಂಡ ಜಾಗದ ಸಿಟಿಎಸ್ ನಂ. 4335 ಇರುತ್ತದೆ. ಅದಕ್ಕೆ ಸಂಬಂಧಪಟ್ಟಂತಹ ಎನ್ ಎ ಕಾಪಿ ಹಾಗೂ ಉತಾರನ್ನು ಪರಿಶೀಲನೆ ಮಾಡಿ ಖರೀದಿ ಮಾಡಿದ್ದೇನೆ. ನಾವು ತೆಗೆದುಕೊಂಡ ಪ್ಲಾಟ ನಂ. 56 ಇರುತ್ತದೆ. ದಿನಾಂಕ 8-7-2005 ಕ್ಕೆ ಅದನ್ನು ಖರೀದಿ ಮಾಡಿದ್ದೇನೆ. ಎನ್ ಎ ಕಾಪಿ ಹಾಗೂ ಅದಕ್ಕ ಸಂಬಂಧಪಟ್ಟ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ಅದು ಮುನಸಿಪಾಲ್ಟಿಯಲ್ಲಿ ದಾಖಲ ಆಗಿದ್ದು ಅದನ್ನು ಹಾಜರ ಮಾಡಿದ್ದೇನೆ. ಮನೆ ರಿಪೇರಿ ಮಾಡಿದ ಬಗ್ಗೆ ಬ್ಯಾಂಕ ಲೋನ ತೆಗೆದಿದ್ದು ಅದರ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ಗೃಹ ಫೈನಾನ್ಸ ಬೆಳಗಾವಿ ಬ್ಯಾಂಕಿನಲ್ಲಿ ಲೋನ ತೆಗೆದಿದ್ದೇನೆ. ನಾವು ಮನೆ ಖರೀದಿ ತೆಗೆದುಕೊಳ್ಳುವ ಮೊದಲೇ ಲೋನ ತೆಗೆದಿದ್ದೇವು. ಲೋನ ತೆಗೆದುಕೊಂಡ ಬಗ್ಗೆ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ನಾನು ಆ ರೀತಿ ಯಾವುದೇ ಕಾಗದ ಪತ್ರಗಳನ್ನು ಹಾಜರ ಮಾಡದೇ ಇದ್ದರೂ ಸಹ ಹಾಜರ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೋರ್ಟನಿಂದ 18 ರ ಸರ್ವೆ ನಂಬರನ್ನು ಮತ್ತೊಮ್ಮೆ ಸರ್ವೆ ಮಾಡಲು ನನಗೆ ತಕರಾರು ಇರುವುದಿಲ್ಲ. ನಾನು ನಮ್ಮ ಖರೀದಿ ಪತ್ರವನ್ನು ಓದಿ ನೋಡಿರುತ್ತೇನೆ. ಆ ಖರೀದಿ ಪತ್ರದಲ್ಲಿ ಸಿ ಟಿ ಎಸ್ ನಂ. 4335ಎ ಎಂದು ದಾಖಲ ಆಗಿದೆ ಎಂದರೆ ನಿಜ. ನಾನು ಪಯಾಜ ಅಹಮದ ಗೋರಿಖಾನ ಇವರ ಕಡೆಯಿಂದ ಖರೀದಿ ಮಾಡಿದ್ದೆನೆ. ಅದನ್ನು ಖರೀದಿ ತೆಗೆದುಕೊಳ್ಳುವ ಪೂರ್ವದಲ್ಲಿ ಅವರ ಖರೀದಿ ಪತ್ರದ ದಾಖಲೆಗಳನ್ನು ನೋಡಿದ್ದೇನೆ. ಆತನ ಖರೀದಿ ಪತ್ರ ನಿ.ಡಿ-72 ರಲ್ಲಿ 4335 ಎಂದು ಮಾತ್ರ ಇದೆ ಎಂದರೆ ನಿಜ.

ಸದರಿ ಖರೀದಿ ಪತ್ರದ ಚಕಬಂದಿಯಲ್ಲಿ ಪೂರ್ವಕ್ಕೆ 41 ಮತ್ತು 42 ರ ಪ್ಲಾಟ ಹಾಗೂ ಪಶ್ಚಿಮಕ್ಕೆ 45 ರ ಪ್ಲಾಟ ದಕ್ಷಿಣಕ್ಕೆ 59 ರ ಪ್ಲಾಟ ಹಾಗೂ ಉತ್ತರಕ್ಕೆ ರೋಡ ಇರುತ್ತದೆ. ಅದು 1 ½ ಗುಂಟೆ ಇರುತ್ತದೆ. ಖರೀದಿ ಮಾಡುವ ಸಮಯದಲ್ಲಿಯೂ ಸಹ ಗೃಹ ಫೈನಾನ್ಸ ಬೆಳಗಾವಿಯಲ್ಲಿ ರೂ. 3,60,000/- ಲೋನ ತೆಗೆದುಕೊಂಡಿದ್ದೇವೆ. ಅನಧೀಕೃತ ಕಟ್ಟಡ ಕಡಿಮೆ ರೇಟಿಗೆ ಸಿಗುತ್ತದೆ ಎಂದು ನಾನು ಉದ್ದೇಶಪೂರ್ವಕವಾಗಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಿಟಿಎಸ್ ನಂ. 4335 ಹಾಗೂ 4335ಎ ಎರಡೂ ಪ್ಲಾಟಗಳಲ್ಲಿ 54 ನೇ ನಂಬರಿನ ಪ್ಲಾಟ ಇಲ್ಲ

ಎಂದರೆ ಸರಿಯಲ್ಲ . ನಾನು ಮತ್ತು ಮೊದಲಿನ ಮಾಲೀಕರು ಸೇರಿ ಖೊಟ್ಟಿ ಪತ್ರಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**